ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

---

ಸಂಖ್ಯೆ:ಎಂ2/ಅ.ದಾ/ತೊ.ಬೇ.ಸ:17/2010–11 ದಿನಾಂಕ:03-02-2011

<u>ಜ್ಞಾಪನ</u>

**ವಿಷಯ:** 2010–11ನೇ ಸಾಲಿನ [redacted]. ಫೆಬ್ರವರಿ ಮತ್ತು ಮಾರ್ಚ್ 2011ರ ಮಾಹೆಗೆ
*ಬೇಕಾಗುವ ತೊಗರಿಬೇಳೆ ಟೆಂಡರ್‌ನ್ನು ಪೂರ್ಣಗೊಳಿಸದಿರುವ ಬಗ್ಗೆ.*

**ಉಲ್ಲೇಖ:** ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು. ಜಿಲ್ಲಾ ಪಂಚಾಯತ್. ದಾವಣಗೆರೆ ರವರ ಪತ್ರ ಸಂಖ್ಯೆ ಅದಾ/ತೊ.ಬೇ.ಟೆಂಡರ್/2010–11. ದಿನಾಂಕ:08.12.2010.

2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾಂ ರವರ *ಅ.ಸ.ಪತ್ರ ಸಂಖ್ಯೆ ಅದಾ/ಬಿ.ವ/2010–11/15. ದಿನಾಂಕ:20.01.2011.*
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ಇವರ ದೂರವಾಣಿ.
4. ಶಿಕ್ಷಣಾಧಿಕಾರಿಗಳು(ಅ.ದಾ), ದಾವಣಗೆರೆ, ಚಿಕ್ಕಮಗಳೂರು. ಕೋಲಾರ. ಚಿಕ್ಕಬಳ್ಳಾಪುರ, ಇವರುಗಳ ದೂರವಾಣಿ ಸಂದೇಶ.
5. ಸರ್ಕಾರದ ಆದೇಶ ಸಂಖ್ಯೆ ಇಡಿ:61/ಎಂ.ಎಂ.ಎಸ್/2009. ಬೆಂಗಳೂರು. ದಿ:07.08.2009. *ಇಡಿ:99/ಸ್ಕೀಮುರ(ಯುನಿಕ್), ದಿನಾಂಕ:07.08.2009.*

* * * * *

<u>**ಪ್ರಸ್ತಾವನೆ:–**</u>

ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10ನೇ ತರಗತಿ ಮಕ್ಕಳಿಗೆ ಬಿಸಿಯೂಟ ನೀಡಲಾಗುತ್ತಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ನಿರ್ದೇಶನದನ್ವಯ ಬಿಸಿಯೂಟದಲ್ಲಿ ಪೌಷ್ಠಿಕಾಂಶವನ್ನು ಮಕ್ಕಳಿಗೆ ನೀಡುವ ಉದ್ದೇಶದಿಂದ ತೊಗರಿಬೇಳೆಯನ್ನು ಬಳಸಲಾಗುತ್ತಿದೆ.

ಅಕ್ಷರ ದಾಸೋಹಕ್ಕೆ ಸಂಬಂಧಿಸಿದಂತೆ ಆಹಾರ ಧಾನ್ಯಗಳ ಸರಬರಾಜಿನ ಹೊಣೆಯನ್ನು ಕಾರ್ಯಕ್ರಮದ ನೋಡಲ್ ಏಜೆನ್ಸಿಯಾದ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಖರೀದಿ ಪ್ರಕ್ರಿಯೆ ನಡೆಸಿ ಸರಬರಾಜು ಮಾಡುತ್ತಿದೆ.

2010–11ನೇ ಸಾಲಿನ ಜನವರಿ, ಫೆಬ್ರವರಿ 2011ರ ಮಾಹೆಗೆ ಬೇಕಾಗುವ ತೊಗರಿಬೇಳೆ ಟೆಂಡರ್‌ಗಳು ಪೂರ್ಣಗೊಳ್ಳದೆ ಬೇಳೆ ಸರಬರಾಜಾಗಿರುವುದಿಲ್ಲ. ಈ ಹಿಂದೆ ಕರೆಯಲಾದ ಟೆಂಡರ್ ದರದಂತೆ ಜನವರಿ ತಿಂಗಳಿಗೆ ಬೇಕಾಗುವ ಬೇಳೆಯನ್ನು ಖರೀದಿ ಮಾಡಿ, ಸರಬರಾಜು ಮಾಡಲಾಗಿದೆ. ಆದರೆ, ಜನವರಿ ತಿಂಗಳು ಕಳೆದರೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದೆ ಇರುವುದರಿಂದ ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಬೇಳೆ ಸರಬರಾಜು ವ್ಯತ್ಯಯದಿಂದ ಧಕ್ಕೆಯುಂಟಾಗುತ್ತದೆ ಎಂದು ಉಲ್ಲೇಖ(1,2&3)ರಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ವರದಿ ಮಾಡಿರುತ್ತಾರೆ. ಉಲ್ಲೇಖ(4)ರಲ್ಲಿ ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳು(ಅ.ದಾ)

2....

ಬೇಳೆ ಸರಬರಾಜಾಗಿಲ್ಲದ ಬಗ್ಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ಈ ಬಗ್ಗೆ ನಿಗಮವನ್ನು ಸಂಪರ್ಕಿಸಲಾಗಿ ನಿಗಮವು ದಿನಾಂಕ:31.01.11ರಂದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸರಬರಾಜುದಾರರಿಗೆ ಬೇಳೆ ಸರಬರಾಜು ಮಾಡಲು ಆದೇಶ ನೀಡಲಾಗಿದೆ. ಆದರೆ ಟೆಂಡರ್‌ನಲ್ಲಿ ಈಗ ನಿಗದಿಯಾಗಿರುವ ದರಕ್ಕಿಂತಲೂ ಅಧಿಕವಾಗಿದ್ದು, ಟೆಂಡರ್‌ದಾರರು ಬೇಳೆ ಸರಬರಾಜು ಮಾಡಲು ಸಾಧ್ಯವಿಲ್ಲವಾದ್ದರಿಂದ ಮರು ಟೆಂಡರ್ ಕರೆಯಲು ಕೋರಿಕೆ ಸಲ್ಲಿಸಿರುತ್ತಾರೆ. ಫೆಬ್ರವರಿ 15, 2011ರೊಳಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಬೇಳೆಯನ್ನು ಸರಬರಾಜು ಮಾಡಲಾಗುವುದೆಂದು ತಿಳಿಸಿರುತ್ತಾರೆ. ಈ ರೀತಿ ಅನಿವಾರ್ಯ ಸಂದರ್ಭಗಳಲ್ಲಿ ದಿನಾಂಕ:07.08.2009ರಲ್ಲಿ ಸರ್ಕಾರವು ತೊಗರಿಬೇಳೆಗೆ ಪರ್ಯಾಯವಾಗಿ ಕಾಳುಗಳನ್ನು ಬಳಸಲು ಉಲ್ಲೇಖ(5)ರಲ್ಲಿ ಸರ್ಕಾರಿ ಆದೇಶವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ನಿಲ್ಲದಂತೆ ಕ್ರಮಕೈಗೊಳ್ಳಲು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ನಿಗಮವು ತೊಗರಿಬೇಳೆ ಸರಬರಾಜು ಮಾಡುವವರೆಗೆ ಅಂದರೆ, ಫೆಬ್ರವರಿ 15, 2011ರವರೆಗೆ ತಾತ್ಕಾಲಿಕವಾಗಿ ಸ್ಥಳೀಯವಾಗಿ ತೊಗರಿಬೇಳೆ ಅಥವಾ ಉಲ್ಲೇಖ(5)ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಇತರೆ ಕಾಳುಗಳನ್ನು ಬೇಳೆ ದಾಸ್ತಾನು ಇಲ್ಲದಿರುವ ಜಿಲ್ಲೆಗಳಲ್ಲಿ ಎಸ್.ಡಿ.ಎಂ.ಸಿ. ಮೂಲಕ ಖರೀದಿಸಿ ಬಿಸಿಯೂಟ ತಯಾರಿಸಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಆದೇಶಿಸಿದೆ. ಫೆಬ್ರವರಿ 15, 2011ರ ನಂತರ ಪರಿಸ್ಥಿತಿಯನ್ನು ಅವಲೋಕನ ಮಾಡಿ ಮುಂದಿನ ಆದೇಶವನ್ನು ನೀಡಲಾಗುವುದು. ಯಾವುದೇ ಕಾರಣಕ್ಕೂ ಪ್ರತಿಷ್ಠಿತ ಕಾರ್ಯಕ್ರಮಕ್ಕೆ ಧಕ್ಕೆ ಬಾರದಂತೆ ಕಾರ್ಯಕ್ರಮ ಯಶಸ್ವಿಗೊಳಿಸಲು ಕೋರಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

**ಪ್ರತಿಯನ್ನು :**

1. ಗೌರವ ಪೂರ್ವಕವಾಗಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದ.
2. ಗೌರವ ಪೂರ್ವಕವಾಗಿ ಮಾನ್ಯ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ನಂ.161, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ, ಜಿಲ್ಲಾ ಪಂಚಾಯತ್, ಇವರಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ರವರುಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ಕಛೇರಿ ಪ್ರತಿ.